**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ, ಧಾರವಾಡ.**

ಸಿಸಿ ನಂಃ **2744/2024**

ಪಿರ್ಯಾದಿಃ ಚಿದಂಬರ ಸೌಹಾರ್ದ ಪತ್ತಿನ
ಸಹಕಾರಿ ನಿಯಮಿತ ಧಾರವಾಡ
ಪ್ರತಿನಿಧಿಸುವವರು ಶ್ರೀಮತಿ ಪರಿಮಳಾ ಆನಂದ ಜೋಶಿ

-ವಿರುದ್ಧ-

ಆರೋಪಿಃ ಕಲ್ಪನಾ ದತ್ತಾತ್ರೇಯ ಕುಲಕರ್ಣಿ

**ದಂಃಪ್ರಃಸಂಃ ಕಲಂ 313 ರಡಿ ಆರೋಪಿತರ ಹೇಳಿಕೆ.**

ಪ್ರಶ್ನೆ **1)** ಃ ನೀವು ಅಭಿಯೋಜನೆಯ ಪರ ನುಡಿದ ಸಾಕ್ಷಿದಾರರ ಸಾಕ್ಷ್ಯವನ್ನು ಆಲಿಸಿದ್ದಿರಾ**?**
ಉತ್ತರಃ

ಪ್ರಶ್ನೆ **2)** ಃ ಪ್ರಾಸಾ-1 ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತಳಾದ ನೀನು ಪಿರ್ಯಾದಿದಾರ ಸಂಸ್ಥೆಯಿಂದ ನಿನ್ನ ಹಣದ ಅವಶ್ಯಕತೆ ಸಲುವಾಗಿ ರೂ 30,000/- ಗಳನ್ನು ಸಾಲ ಪಡೆದು ಸದರಿ ಸಾಲವನ್ನು ಒಟ್ಟು 24 ಕಂತಗಳಲ್ಲಿ ಬಡ್ಡಿ ಸಮೇತ ಮರುಪಾವತಿ ಮಾಡುತ್ತೇನೆ ಎಂದು ಭರವಸೆ ನೀಡಿ ನೀವು ಸದರಿ ಸಾಲದ ಮರುಪಾವತಿಗಾಗಿ ಫೆಡರಲ್ ಬ್ಯಾಂಕ ಲಿ ಶಾಖೆಯ ಚೆಕ್ ನಂಬರ ಃ 057252 ದಿಃ 03-08-2023 ರಂದು ರೂ.38,000/-ನೇದ್ದನ್ನು ಪಿರ್ಯಾದಿದಾರರಿಗೆ ನೀಡಿದ್ದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ?
ಉತ್ತರಃ

ಪ್ರಶ್ನೆ **3)** ಃ ಪ್ರಾಸಾ 1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಪಿರ್ಯಾದುದಾರ ಅದನ್ನು ನಗದಿಕರಣಕ್ಕಾಗಿ ತನ್ನ ಬ್ಯಾಂಕ್ ಆದ ಕರ್ನಾಟಕ ಬ್ಯಾಂಕ ಲಿ ಗೋಪಾಲಪುರ ಶಾಖೆ ಧಾರವಾಡದಲ್ಲಿ ಹಾಜರುಪಡಿಸಿದಾಗ ಅದು "Drawer signature incomplete" ಎಂಬ ಶರಾದೊಂದಿಗೆ ಸದರಿ ಚೆಕ್ ದಿನಾಂಕ 04.08.2023 ರಂದು ಅಮಾನ್ಯಗೊಂಡಿದ್ದು ತದನಂತರ ಆರೋಪಿತಳು ಸದರಿ ಚೆಕ್ಕನ್ನು ಸೆಪ್ಟೆಂಬರ 2023 ಕೊನೆ ವಾರದಲ್ಲಿ ಹಾಜರುಪಡಿಸಲು ವಿನಂತಿಸಿದಾಗ ಪಿರ್ಯಾದಿ ಸದರಿ ಚೆಕ್ಕನ್ನು ದಿಃ26-9-2023 ಸದರಿ ಬ್ಯಾಂಕಗೆ ಹಾಜರಿಪಡಿಸಿದಾಗ ಮತ್ತೆ ಅದು "Drawer signature differs" ಎಂಬ ಶರಾದೊಂದಿಗೆ ದಿನಾಂಕ 27.09.2023 ರಂದು ಅಮಾನ್ಯಗೊಂಡಿದ್ದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ ?
ಉತ್ತರಃ

ಪ್ರಶ್ನೆ **4)** ಃ ಪ್ರಾಸಾ 1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸದರಿ ಅಮಾನ್ಯಗೊಂಡ ಚೆಕ್ಕ ಬಗ್ಗೆ ತಮಗೆ ವಿಷಯ ತಿಳಿಸಿ ದಿಃ 25.10.2023 ರಂದು ಪಿರ್ಯಾದುದಾರ ಕಾನೂನುಬದ್ದ ನೋಟಿಸ್ ನೀಡಿದ್ದು, ಅದು ನಿಮಗೆ ಜಾರಿಯಾಗಿದ್ದರೂ ಸಹ ಸದರಿ ನೋಟಿಸನ್ನು ಸ್ವೀಕರಿಸದೇ ಮತ್ತು ಚೆಕ್ ಹಣ ಪಾವತಿಸದೇ ನೀವು ಪಿರ್ಯಾದಿದಾರರೊಂದಿಗೆ ಮೋಸ ಮಾಡುವ ಉದ್ದೇಶದಿಂದ ಖೊಟ್ಟಿ ಚೆಕ್ಕ ವಿತರಿಸಿ ಲಿಖಿತ ವರ್ಗಾವಣೆಯ ಕಾಯ್ದೆಯ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿದ್ದೀರಿ ಎಂದು ಸಾಕ್ಷ್ಯವನ್ನು  ನುಡಿದಿರುತ್ತಾರೆ ?

ಉತ್ತರಃ

ಪ್ರಶ್ನೆ **5)** ಃಪ್ರಾಸಾ 1 ರವರು ತಮ್ಮ ಮುಂದುವರೆದ ತಮ್ಮ ಸಾಕ್ಷ್ಯದಲ್ಲಿ ದಿಃ 07-09-2023 ರ ಅಧಿಕಾರ ಪತ್ರದ ದೃಢಿಕೃತ ನಕಲು, ದಿಃ03-08-2023 ರ ಚೆಕ್ಕು, ರಿಟರ್ನ ಮೇಮೋ ಲೀಗಲ್ ನೋಟಿಸ, ಅಂಚೆ ರಿಸೀಧಿ, ತೆರೆಯದ ಅಂಚೆ ಲಕೋಟೆ, ಶಾಖಾ ಪ್ರಮಾಣ ಪತ್ರದ ದೃಢಿಕೃತ ನಕಲು, ನೊಂದಣಿ ಪ್ರಮಾಣ ಪತ್ರದ ದೃಢಿಕೃತ ನಕಲು, ಸಾಲದ ಅರ್ಜಿ, ಪ್ರೊಸೆಸಿಂಗ ನೋಟ್, ಪ್ರಾಮೀಸರಿ ನೋಟ, ಡೆಬಿಟ್ ವೋಚರ, ಒಪ್ಪಿಗೆ ಪತ್ರ, 65 ಬಿ ಸರ್ಟಿಪಿಕೇಟ್ ಹಾಗೂ ಸ್ಟೇಟಮೆಂಟ ಆಫ್ ಅಕೌಂಟ ಕ್ರಮವಾಗಿ ನಿಪಿ.1 ರಿಂದ 14 ಎ ರಂತೆ ಹಾಜರುಪಡಿಸಿರುವುದಾಗಿ ಸಾಕ್ಷ್ಯವನ್ನು  ನುಡಿದಿರುತ್ತಾರೆ ?

ಉತ್ತರಃ

ಪ್ರಶ್ನೆ **6)** ಃ ನಿಮಗೆ ಬೇರೆ ಏನಾದರೂ ಹೇಳುವುದು ಇದೆಯಾ**?**

ಉತ್ತರಃ

ಪ್ರಶ್ನೆ **7)** ಃ  ನಿಮ್ಮ ಪರ ಸಾಕ್ಷಿ ವಿಚಾರಣೆ ಇದೆಯೇ**?**

ಉತ್ತರಃ

(ಮೇಲಿನ ಪ್ರಶ್ನೆಗಳನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿತನಿಗೆ ಕನ್ನಡ ಭಾಷೆಯಲ್ಲಿ  ಓದಿ ಹೇಳಲಾಗಿದ್ದು ಅವರು ನೀಡಿದ ಉತ್ತರಗಳನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ)

**(** ಅಲ್ಲಪ್ಪ ಮಹಾದೇವಪ್ಪ ಬಡಿಗೇರ **)**
**3** ನೇ ಹೆಚ್ಚುವರಿ ಹಿರಿಯ ದಿವಾಣನ್ಯಾಯಾಧೀಶರು
ಹಾಗೂ ಸಿಜೆಎಂ ಧಾರವಾಡ**.**

ದಿನಾಂಕಃ